ಕಥೆ



**ಪ್ರೇಮಕುಮಾರ್ ಹರಿಯಬ್ಬೆ**

ಕಲೆ: ವಿಶ್ವನಾಥ್ ಎ.ಎಸ್.

# ಅಂತ್ಯಕ್ರಿಯೆ

ಸುಹಾಸ್ ರಾನಡೆಯ ಬಾಡಿ ತಗಂಡು ಹೋಗಲು ಬರ್ತೀವಿ ಅಂದವರು ಬಂದರೋ, ಇಲ್ಲವೋ ಗೊತ್ತಾಗಲಿಲ್ಲವಲ್ಲ. ಪೊಲೀಸರಿಗೆ ಫೋನ್ ಮಾಡಿ ಕೇಳೋಣವೆಂದರೆ ಇಲ್ಲಿ ಮೊಬೈಲ್ ಸಿಗ್ತಿಲ್ಲ. ಬಸ್ಸಾದರೂ ಬಂದಿದ್ದರೆ ಮುಂದೆ ಹೋದ ಮೇಲೆ ಸಿಗ್ನಲ್ ಸಿಗ್ತಿತ್ತೇನೋ ಎಂದು ಮನಸ್ಸಿನಲ್ಲೇ ಹೇಳಿಕೊಳ್ಳುತ್ತಾ ಬಸ್ಸಿಗೆ ಕಾಯುತ್ತಿದ್ದವರನ್ನು ರಾಜೀವ ದಿಟ್ಟಿಸಿ ನೋಡಿದ. ಎಲ್ಲರೂ ಹರಟುತ್ತಾ ಕೂತಿದ್ದರು. ಕೆಲವರು ಎಲೆ ಅಡಕೆ ಜಗಿಯುತ್ತಾ, ಆಗಾಗ ಉಗುಳುತ್ತಿದ್ದರು. ದಿಬ್ಬಣದಲ್ಲಿ ಇದ್ದವರಲ್ಲೂ ಧಾವಂತ ಇಲ್ಲ!. ಬಸ್ಸು ಎಷ್ಟೊತ್ತಿಗೆ ಬರುತ್ತೆ ಎಂದು ಪಕ್ಕದಲ್ಲಿ ಕೂತವನನ್ನು ಮೂರ್ನಾಲ್ಕು ಸಲ ಕೇಳಿದ್ದ. ಅವನು ಬರೋ ಹೊತ್ತಾಯ್ತು ಎಂದನೇ ವಿನಾ ಟೈಮ್ ಹೇಳಲಿಲ್ಲ. ಐದಾರು ನಿಮಿಷ ಕಳೆಯುವಷ್ಟರಲ್ಲಿ 'ರೀ ಸ್ವಾಮಿ, ಬಸ್ ಯಾವಾಗ್ ಬರುತ್ತೆ ಅಂತ ಕೇಳ್ತಿದ್ರಲ್ಲ, ಅಲ್ನೋಡಿ ಬರ್ತಾ ಇದೆ...' ಎಂದ. ಅಷ್ಟರಲ್ಲಿ ಮರದ ಕೆಳಗೆ ಕೂತಿದ್ದವರೆಲ್ಲ ಎದ್ದು ನಿಂತರು. ರಾಜೀವನೂ ಎದ್ದು ರಸ್ತೆಗೆ ಬಂದ. ಬಸ್ಸು ನಿಲ್ಲುತ್ತಿದ್ದಂತೆ ಎಲ್ಲರಿಗಿಂತ ಮೊದಲು ಹತ್ತಿ ಕೂತ.

ಬಸ್ಸು ಮೂರ್ನಾಲ್ಕು ಕಿಲೋ ಮೀಟರು ಬರುವಷ್ಟರಲ್ಲಿ ಅವನ ಫೋನ್ ರಿಂಗ್ ಆಯಿತು. ರಿಸೀವ್ ಮಾಡುತ್ತಿದ್ದಂತೆ 'ಎಲ್ಲಿದ್ದೀರಾ ರಾಜೀವ್? ಒಂದು ಗಂಟೆ ಆಯ್ತು, ಇನ್ನೂ ಆಫೀಸಿಗೆ ಬಂದಿಲ್ಲ ಯಾಕೆ?. ಇವತ್ತು ಸೆಷನ್ ಶುರುವಾಗುತ್ತೆ. ಮೂರು ಗಂಟೆಗೆ ಸೆಂಟ್ರಲ್ ಹೋಮ್ ಮಿನಿಸ್ಟರ್ ಪ್ರೆಸ್ ಕಾನ್ಫರೆನ್ಸ್ ಇದೆ. ಅದನ್ನು ಕವರ್ ಮಾಡಿ ಅಂತ ನಿಮಗೆ ಹೇಳೋಕೆ ಫೋನ್ ಮಾಡಿದೆ' ಎನ್ನುತ್ತಿದ್ದಂತೆ ರಾಜೀವ, ಹಲೋ ಹಲೋ ಎನ್ನುತ್ತಾ ಫೋನ್ ಆಫ್ ಮಾಡಿಕೊಂಡ! ಅರೇ, ಇವತ್ತು ಸೆಷನ್ ಶುರುವಾಗುತ್ತೆ ಅನ್ನೋದು ನೆನಪೇ ಆಗಲಿಲ್ಲವಲ್ಲ ಎಂದು ಪೇಚಾಡಿದ.

'ಸರ್, ಇವತ್ತು ನಂಗೆ ರಜಾ ಬೇಕು. ಈಗ ನಾನು ಮಾಗಡಿ ಹತ್ರ ಯಾವುದೋ ಊರಲ್ಲಿದ್ದೀನಿ. ಇಲ್ಲಿಗೆ ಹೇಗೆ ಬಂದೆ ಅನ್ನೋದು ಗೊತ್ತಿಲ್ಲ. ಬೆಂಗಳೂರು ಕಡೆಗೆ ಹೊರಟಿರೋ ಬಸ್‌ನಲ್ಲಿದ್ದೀನಿ...' ಎಂದು ಹೇಳಬೇಕೆಂದು ಮನಸ್ಸಿನಲ್ಲಿ ರಿಹರ್ಸಲ್ ಮಾಡಿಕೊಳ್ಳುತ್ತಿರುವಾಗ ರಾನಡೆಯ ಬಾಡಿ ಇನ್ನೂ ಮಾರ್ಚರಿಯಲ್ಲೇ ಇರುವುದು ನೆನಪಾಯಿತು. ರಾನಡೆಯ ವಿಷಯ ಹೇಳಿ, ಇವತ್ತು ರಜಾ ಬೇಕು ಎಂದು ಕೇಳಬೇಕು ಎಂದುಕೊಳ್ಳುತ್ತಾ ಚೀಫ್‌ಗೆ ಫೋನ್ ಮಾಡಿದ. 'ಅಲ್ರೀ, ನಾನು ಮಾತಾಡ್ತಿರುವಾಗ ನೀವು ಫೋನ್ ಕಟ್ ಮಾಡಿದರೆ ನಾನು ಏನಂತ ತಿಳ್ಕೋಬೇಕು...' ಎಂದು ಚೀಫ್ ರೇಗಿದರು.

'ಸಾರಿ ಸರ್, ನಾನು ಬೇಕಂತ ಕಟ್ ಮಾಡಲಿಲ್ಲ. ಕಾಲ್ ಡ್ರಾಪ್ ಆಯ್ತು. ಬಸ್ಸಲ್ಲಿದ್ದೀನಿ, ಸಿಗ್ನಲ್ ಪ್ರಾಬ್ಲಂ. ಮತ್ತೆ ಡಿಸ್ಕನೆಕ್ಟ್ ಆಗಬಹುದು ಎನ್ನುತ್ತಾ